OS 60/2021 PW-1

**ದಿನಾಂಕಃ 18-02-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರಿಂದಃ</u>**

1. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು , ಬರೆಯಲು ಸುಮಾರಾಗಿ ಬರುತ್ತದೆ. ನನಗೆ ಇಂಗ್ಲಿಷ್ ಓದಲು ಬರುವುದಿಲ್ಲ. ನಾನು ಎಮ್ಮೆರಹಳ್ಳಿ ಗ್ರಾಮದಲ್ಲಿದ್ದೆ , ಈಗ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ 7-8 ವರ್ಷಗಳಿಂದ ವಾಸವಾಗಿದ್ದೇನೆ. ನಾನು ಮದುವೆಯಾದಾಗಿನಿಂದಲೂ ಅಲ್ಲಿಯೇ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಹೊಸಕೆರೆಯಲ್ಲಿ ನಾನು ಮದುವೆಯಾಗಿರುತ್ತೇನೆ. ನನ್ನ ಮಕ್ಕಳು ಚೇಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಾನು ಅಲ್ಲಿ ಕೂಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಎಲ್ಲಾ ವಿಚಾರದ ಮಾಹಿತಿಯನ್ನು ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಿದ್ಧಪಡಿಸುವಾಗ ಹೇಳಿರುತ್ತೇನೆ.

2. ಈ ದಾವೆಯನ್ನು ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ನಾನು ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನನ್ನ ಪರವಾಗಿ ಹಾಗೂ ಇತರೆ ವಾದಿಗಳ ಪರವಾಗಿ ಸಲ್ಲಿಸಿರುತ್ತೇನೆ. ಇತರೆ ವಾದಿಗಳ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ. ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾವೆಲ್ಲರೂ ಸೇರಿ ಮಾಹಿತಿ ನೀಡಿರುತ್ತೇವೆ.

3. 7 ನೇ ವಾದಿ ಬಿಂದು ಬಂದಕುಂಟೆ ಗ್ರಾಮದಲ್ಲಿ ವಾಸವಾಗಿದ್ದಾಳೆ. 8 ನೇ ವಾದಿ ಸಿಂಧು ಗೌಡಗೆರೆಯಲ್ಲಿ ವಾಸವಾಗಿದ್ದಾರೆ. ಸದರಿ 7 ಮತ್ತು 8 ನೇ ವಾದಿಗಳಿಗೆ ಸರಿಯಾದ ಮಾಹಿತಿ ನೀಡದೇ ಅವರ ಒಪ್ಪಿಗೆ ಇಲ್ಲದೇ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 7 ಮತ್ತು 8 ನೇ ವಾದಿಗಳನ್ನು ಯಾರಾದರೂ ಒಬ್ಬರನ್ನು ವಿಚಾರಣೆ ಮಾಡಿಸಲು ತೊಂದರೆ ಇಲ್ಲ.

4. ನಿಪಿ-1 ನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ-1 ರಲ್ಲಿ ಕಾಣಿಸಿರುವ ಚಿತ್ತಮ್ಮ ನನ್ನ ಅಕ್ಕ. ಅವರಿಗೆ ಇಬ್ಬರು ಮಕ್ಕಳು. ಅವರ ಹೆಸರು ಮಂಜುನಾಥ ಮತ್ತು ಮಹಾಲಕ್ಷ್ಮಮ್ಮ. ಚಿತ್ತಮ್ಮನ ಮಗಳನ್ನು ನನ್ನ ಚಿಕ್ಕಪ್ಪನ ಮಗ ಚಿತ್ತಯ್ಯನಿಗೆ ಕೊಟ್ಟು

ಮದುವೆ ಮಾಡಿರುತ್ತೇವೆ. ನಿಪಿ-1 ರಲ್ಲಿ ಸದರಿ ಮಂಜುನಾಥ ಮತ್ತು ಮಹಾಲಕ್ಷ್ಮಮ್ಮನವರನ್ನು ಯಾತಕ್ಕಾಗಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸೇರಿಸಬೇಕಾಗಿತ್ತು ಮರೆತುಹೋಗಿದ್ದೇನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸದರಿ ಮಂಜುನಾಥ ಮತ್ತು ಮಹಾಲಕ್ಷ್ಮಮ್ಮನವರನ್ನು ಯಾತಕ್ಕಾಗಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ಏನೂ ಗೊತ್ತಿಲ್ಲ ನಾನೇ ನೋಡಿಕೊಳ್ಳಬೇಕು ಎಂದು ನುಡಿಯುತ್ತಾರೆ. ಸದರಿ ಮಂಜುನಾಥ ಮತ್ತು ಮಹಾಲಕ್ಷ್ಮಮ್ಮನವರು ಈ ದಾವೆ ನಾನೇ ನಡೆಸಿ ಎಂದು ಬರೆದುಕೊಟ್ಟಿರುವುದಿಲ್ಲ. ಚಿತ್ತಮ್ಮಳಿಗೆ ಮಂಜುನಾಥ ಮತ್ತು ಮಹಾಲಕ್ಷ್ಮಮ್ಮ ಎಂಬ ಮಕ್ಕಳು ಇದ್ದಾರೆ ಎಂಬ ಮಾಹಿತಿಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ.

5. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ನನ್ನ ಚಿಕ್ಕಪ್ಪಂದಿರು ಮತ್ತು ಅತ್ತೆಗೆ ಸಮನಾದ ಹಕ್ಕು ಇದೆಯಾ ಎಂದರೆ ಸಾಕ್ಷಿಯು ಹೌದು ಹಕ್ಕು ಇದೆ ಎಂದು ನುಡಿಯುತ್ತಾರೆ. ಇತರೆ ವಾದಿಗಳು ಇರುವ ಮನೆಗಳು ತಮ್ಮ ಸ್ವಂತ ಜಾಗದಲ್ಲಿ ಕಟ್ಟಿಕೊಂಡಿರುತ್ತಾರೆ. ನನ್ನ ತಂದೆ-ತಾಯಿ ಕಡೆಯಿಂದ ಬಂದ ಜಮೀನಿನಲ್ಲಿ ಸದರಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ನನ್ನ ತಾಯಿ ಕಡೆಯಿಂದ ಬಂದ ಜಮೀನಿನಲ್ಲಿ ನಾನು ಎರಡು ಮನೆಗಳನ್ನು ಕಟ್ಟಿಕೊಂಡಿದ್ದೇನೆ.

6. 5ನೇ ಪ್ರತಿವಾದಿ ನನ್ನ ತಾಯಿ ಕಡೆಯಿಂದ ಬಂದ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಒಂದು ಮನೆಯಲ್ಲಿ ನಾನು ಮತ್ತು ನನ್ನ ತಮ್ಮ ರಾಜಣ್ಣ ವಾಸವಾಗಿದ್ದೇವೆ. ಇನ್ನೊಂದು ಮನೆಯಲ್ಲಿ ನನ್ನ ಚಿಕ್ಕಪ್ಪ ಮತ್ತು ಕೃಷ್ಣಪ್ಪನಿಗೆ ಬಿಟ್ಟಿರುತ್ತೇವೆ. ಸದರಿ ಮನೆಯ ಜಮೀನು ನನ್ನ ತಾಯಿಯ ತಂದೆಗೆ ಸೇರಿದ್ದು ಎಂದರೆ ಸರಿ. 1ನೇ ವಾದಿ ತಿಮ್ಮಣ್ಣ ಸ.ನಂ.10/1 ರಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ. ಸದರಿ ಮನೆಯ ಖಾತೆ ನನ್ನ ತಂದೆಯ ಹೆಸರಿನಲ್ಲಿದೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ.

7. ಸ.ನಂ.93/1, ಸ.ನಂ.93/5 ಮತ್ತು ಸ.ನಂ.93/6 ಜಮೀನುಗಳನ್ನು ನನ್ನ ತಂದೆ ಖರೀದಿಸಿರುತ್ತಾರೆ. ಸ.ನಂ.93/1, ಸ.ನಂ.93/5 ಮತ್ತು ಸ.ನಂ.93/6 ನ್ನು ನನ್ನ ತಾಯಿ

ಕ್ರಯಪತ್ರದ ಮೂಲಕ ಖರೀದಿಸಿದ ಸ್ವತ್ತು ಎಂದರೆ ಸಾಕ್ಷಿಯು ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲದೇ ಇದ್ದಾಗ ಫೋರ್ಜರಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಜಾಂಡೀಸ್ ಆಗಿತ್ತು. ನನ್ನ ತಾಯಿಗೆ 3-4 ವರ್ಷದಿಂದ ಜಾಂಡೀಸ್ ಇತ್ತು. ನನ್ನ ತಾಯಿಯನ್ನು ನಾವೇ ಆಸ್ಪತ್ರೆಗೆ ತೋರಿಸಿರುತ್ತೇವೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ನಾನು ಆ ಬಗ್ಗೆ ಸುಳ್ಳು ಹೇಳುತ್ತಿರುವ ಕಾರಣ ಯಾವುದೇ ದಾಖಲೆ ಸಿಗುವುದಿಲ್ಲ ಎಂದರೆ ಸರಿಯಲ್ಲ.

8. ನನ್ನ ತಂದೆ-ತಾಯಿ ಜೀವಂತವಿರುವವರೆಗೂ 5ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಎಲ್ಲರೂ ನೋಡಿಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ. 5ನೇ ಪ್ರತಿವಾದಿ ನನ್ನ ತಂದೆ-ತಾಯಿಗೆ ನೋಡಿಕೊಳ್ಳುತ್ತಿದ್ದ ಕಾರಣ ಸ.ನಂ. 93/5 ನ್ನು ದಾನಪತ್ರದಂತೆ ದಾನ ಮಾಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸ್ವತಃ ಅದು ಸೃಷ್ಟಿಸಿದ ದಾಖಲೆ ಎಂದು ನುಡಿಯುತ್ತಾರೆ.

9. ಸ.ನಂ.10/1 ರ ಜಮೀನು ನನ್ನ ತಾತ ಕರೇತಿಮ್ಮಯ್ಯನಿಗೆ ಸೇರಿದ್ದು. ಸದರಿ ಆಸ್ತಿ ಅವರಿಗೆ ಯಾವಾಗ ಬಂತು ಎಂದು ನನಗೆ ಗೊತ್ತಿಲ್ಲ. ಎಲಿಯೂರು ಗ್ರಾಮದ ಸ.ನಂ.36 ರ ಜಮೀನು ನನ್ನ ತಂದೆ ಖರೀದಿಸಿರುತ್ತಾರೆ. ಸದರಿ ಆಸ್ತಿಯ ಬಗ್ಗೆ ನನ್ನ ವಕೀಲರಿಗೆ ಹೇಳಿರುತ್ತೇನೆ. ಸದರಿ ಜಮೀನನ್ನು ಈ ದಾವೆಯಲ್ಲಿ ಯಾತಕ್ಕಾಗಿ ಸೇರಿಸಿರುವುದಿಲ್ಲ ಎಂದರೆ ಗೊತ್ತಿಲ್ಲ.

**<u>5ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.